2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).
ಎಸ್.ಸಿ. ನಂ. 5017/2022

ದಿಃ 06.02.2024 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

7. ದೂರು ನೀಡುವಾಗ ಘಟನೆ ರಾತ್ರಿ 8 ಗಂಟೆಗೆ ನಡೆದಿದೆ ಎಂದು ಹೇಳಿದ್ದು ನಂತರ ಘಟನೆ ರಾತ್ರಿ 11.00 ಗಂಟೆಗೆ ನಡೆದಿತ್ತು ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ನಾನು ದಿಃ 04.03.2022 ಮತ್ತು 11.03.2022 ರಂದು ಮರು ಹೇಳಿಕೆಗಳಲ್ಲಿ ನನ್ನ ಪಾಟೀ ಸವಾಲಿನಲ್ಲಿ ಹೇಳಿದಂತಹ ವಿಷಯಗಳನ್ನು ಹಾಗೂ ಮೇಲೆ ಹೇಳಿದಂತಹ ವಿಷಯಗಳನ್ನು ಹೇಳಿರುತ್ತೇನೆ ಎಂದರೆ ಸರಿ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಾಟ್ಸ್ ಅಪ್ ವಿಡಿಯೋ ಕಾಲ್ ಮುಖಾಂತರ ತೋರಿಸಿದ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ

8. ನೀವು ನಿಮ್ಮ ತಾಯಿಯ ಜೊತೆ ಮಾತನಾಡಿದ್ದೀರಿ ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು. ಸಾಕ್ಷಿ ಪುನಃ ನುಡಿಯುತ್ತಾರೆ ನನ್ನ ತಾಯಿ ಕೈಸನ್ನೆಯಲ್ಲಿ ಹೇಳಿರುತ್ತಾರೆ. ಪೊಲೀಸರಿಗೆ ಆಸ್ಪತ್ರೆಯಲ್ಲಿ ನನ್ನ ತಾಯಿ ಕೈ ಸನ್ನೆಯಲ್ಲಿ ಹೇಳಿದ್ದರು ಅದನ್ನು ಪೊಲೀಸರು ಬರವಣಿಗೆ ಮಾಡಿಕೊಂಡರು. ಆಸ್ಪತ್ರೆಯಲ್ಲಿ ನನ್ನ ತಾಯಿ ಮಾತನಾಡಿ ಪೊಲೀಸರಿಗೆ ವಿವರಗಳನ್ನು ಹೇಳಿದ್ದು ಅದನ್ನು ಪೊಲೀಸರು

ಬರೆದುಕೊಂಡಿದ್ದರೂ ಕೂಡ ನನ್ನ ತಾಯಿ ಕೈಸನ್ನೆಯಲ್ಲಿ ಪೊಲೀಸರಿಗೆ ಹೇಳಿದ್ದರು ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಒಂದೇ ಬಾರಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಾನು ಯಾವತ್ತೂ ಸುಬ್ರಮಣಿಯ ವಿರುದ್ಧ ಹೇಳಿಕೆ ನೀಡಿಲ್ಲ ಎಂದರೆ ಸರಿ. ನನ್ನ ತಾಯಿಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಸುಬ್ರಮಣಿಯವರ ವಿರುದ್ಧ ಏನೂ ಹೇಳಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)